# ‘ಎಲ್ಲರೊಳಗೊಬ್ಬ ನಾನು’

**ರಾಜ್‌ಕುಮಾರ ನಿಧನದ ನಂತರ ಕನ್ನಡ ಚಿತ್ರರಂಗವನ್ನು ಆವರಿಸಿದ್ದ ನಾಯಕತ್ವದ ಕೊರತೆ ಅಂಬರೀಷ್ ಹೊರಟು ಹೋದಮೇಲೆ ಇನ್ನಷ್ಟು ಗಾಢವಾಗಿ ಕಾಡಲಾರಂಭಿಸಿತ್ತು. ಈಗಂತೂ ಕೊರೊನಾ ಸಂಕಷ್ಟಕ್ಕೆ ಚಿತ್ರರಂಗ, ಏದುಸಿರು ಬಿಡುತ್ತಿದೆ. ಇಂಥ ಸಮಯದಲ್ಲಿ ಶಿವರಾಜ್‌ಕುಮಾರ್ ಚಿತ್ರರಂಗದ ನಾಯಕತ್ವವನ್ನು ವಹಿಸಿಕೊಂಡಿದ್ದಾರೆ. ಅವರ ನಾಯಕತ್ವದಲ್ಲಿ ಚಿತ್ರರಂಗ ಮರಳಿ ಹಳಿಗೆ ಏರುವುದೇ? ಹೊಸ ವಿಪತ್ತಿನ ಜೊತೆಗೆ ಹಳೆಯ ಕಾಲದಿಂದಲೂ ಕಾಡುತ್ತಿದ್ದ ಕೆಲವು ಸಮಸ್ಯೆಗಳಿಗೆ ಪರಿಹಾರದ ದಾರಿ ತೆರೆದುಕೊಳ್ಳಬಹುದೇ ಎಂಬಿತ್ಯಾದಿ ಪ್ರಶ್ನೆಗಳಿಗೆ ಶಿವಣ್ಣನ ಜೊತೆಗಿನ ಈ ಮಾತುಕತೆಯಲ್ಲಿ ಉತ್ತರದ ಸುಳಿವು ಸಿಗುತ್ತದೆ.**

■ **ಪದ್ಮನಾಭ ಭಟ್**

◆ **ತುಂಬ ಹಿಂದಿನಿಂದಲೂ ಚಿತ್ರರಂಗದ ನಾಯಕತ್ವ ವಹಿಸಿಕೊಳ್ಳುವ ಮಾತು ಬಂದಾಗೆಲ್ಲ ನೀವು ಹಿಂದೆ ಸರಿದಿದ್ದಿರಿ. ಈಗ ನಾಯಕತ್ವ ವಹಿಸಿಕೊಳ್ಳಬೇಕು ಅನಿಸಲು ಕಾರಣವೇನು?**

ಈಗ ಚಿತ್ರರಂಗ ತುಂಬಾ ಗಂಭೀರವಾದ ಸಂಕಷ್ಟದಲ್ಲಿದೆ. ಇಲ್ಲಿ ನಾಯಕತ್ವ ವಹಿಸಿಕೊಳ್ಳುವುದು ಅನ್ನುವುದಕ್ಕಿಂತ, ಎಲ್ಲರನ್ನೂ ಒಟ್ಟಿಗೇ ಸೇರಿಸಿ ಜನರ ಸೇವೆ ಮಾಡಲು ಇದು ಸರಿಯಾದ ಕಾಲ ಎಂದು ನನಗನಿಸಿತು. ನನ್ನನ್ನು ನಾನು ಲೀಡರ್ ಎಂದು ಖಂಡಿತ ಅಂದುಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಎಲ್ಲರೊಳಗೆ ನಾನೂ ಒಬ್ಬ ಎಂದು ಅಂದುಕೊಳ್ಳಲಿ ಎಂದು ಬಯಸುತ್ತೇನೆ. ಚಿತ್ರರಂಗದ ಎಲ್ಲರಿಗೂ ನನ್ನ ಬಗ್ಗೆ ಗೊತ್ತು. ಇಲ್ಲಿ ಎಲ್ಲರೂ ಕಂಫರ್ಟ್ ಆಗಿರಬೇಕು. ಹಾಗೆಯೇ ಎಲ್ಲರೂ ಒಟ್ಟಾಗಿ ಸವಾಲುಗಳನ್ನು ಎದುರಿಸಬೇಕು.

◆ **ನಿಮ್ಮ ಪ್ರಾಥಮಿಕ ಆದ್ಯತೆಗಳು ಏನು?**

ಚಿತ್ರರಂಗದಲ್ಲಿ ಸಾಕಷ್ಟು ತೊಂದರೆಗಳಿವೆ. ಆದರೆ ಈಗ ಚಿತ್ರರಂಗದ ಮುಂದಿರುವುದು ಉಳಿವಿನ ಸಮಸ್ಯೆ. ಸರ್ವೈವಲ್ ಎನ್ನುವುದೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಮೂರು ನಾಲ್ಕು ತಿಂಗಳಿಂದ ಚಿತ್ರೀಕರಣವೇ ನಡೆಯುತ್ತಿಲ್ಲ. ಈಗ ಚಿತ್ರೀಕರಣಕ್ಕೆ ಅನುಮತಿ ಕೊಟ್ಟಿದ್ದಾರೆ. ಆದರೆ ಎಲ್ಲವು ಸರಿಯಾಗಿ ಶುರುವಾಗಲಿಕ್ಕೆ ಇನ್ನು ಕನಿಷ್ಠ ಐದಾರು ತಿಂಗಳಾದರೂ ಹಿಡಿಯುತ್ತದೆ. ಈಗಾಗಲೇ ಸುದೀಪ್ ಚಿತ್ರೀಕರಣ ಶುರುಮಾಡಿದ್ದಾರೆ. ಮುಂದಿನ ತಿಂಗಳಿಂದ ನಾನೂ ಚಿತ್ರೀಕರಣ ಶುರು ಮಾಡುತ್ತಿದ್ದೇನೆ. ಆದರೆ ಈ ಎಲ್ಲವೂ ಪೂರ್ತಿಯಾಗಿ ಶುರುವಾಗುವವರೆಗೆ ಚಿತ್ರರಂಗದವರ ಉಳಿವಿಗಾಗಿ ಏನು ಮಾಡಬಹುದು ಎಂಬುದು ನಮ್ಮ ಮುಂದಿರುವ ಮೊದಲ ಪ್ರಶ್ನೆ.

ಇದರ ಕುರಿತು ಸರ್ಕಾರದ ಗಮನ ಸೆಳೆಯಬೇಕು. ಸರ್ಕಾರ ಚಿತ್ರರಂಗವನ್ನು ಮರೆತಿದೆ ಎಂದು ಹೇಳುತ್ತಿಲ್ಲ. ಆದರೆ ಕೇಳಬೇಕಾಗಿರುವುದು ನಮ್ಮ ಕರ್ತವ್ಯ. ನಮ್ಮವರನ್ನು ನಾವು ಕೇಳುವುದರಲ್ಲಿ ತಪ್ಪೇನಿಲ್ಲವಲ್ಲ. ಸರ್ಕಾರ ನಮಗೆ ಸಕಾರಾತ್ಮಕವಾಗಿ ಸ್ಪಂದಿಸುತ್ತದೆ ಎಂಬ ನಂಬಿಕೆ ನನಗಿದೆ.

ಮೊದಲು ಜೀವ; ಆಮೇಲೆ ಜೀವನ. ಇದಕ್ಕೇ ನಮ್ಮ ಮೊದಲ ಆದ್ಯತೆ.

◆ **ಆಗಸ್ಟ್ ತಿಂಗಳಿಂದ ಚಿತ್ರಮಂದಿರಗಳನ್ನು ತೆರೆಯುವುದಕ್ಕೆ ಅನುಮತಿ ಕೊಡಲಾಗುತ್ತದೆ ಎಂಬ ಮಾತು ಕೇಳಿಬರುತ್ತಿವೆ. ಈ ಪರಿಸ್ಥಿತಿಯಲ್ಲಿ ಚಿತ್ರಮಂದಿರಗಳನ್ನು ನಡೆಸಲು ಸಾಧ್ಯವೇ?**

ಚಿತ್ರಮಂದಿರಗಳಿಗೆ ಯಾವಾಗ ಅನುಮತಿ ಕೊಡುತ್ತಾರೆ ಗೊತ್ತಿಲ್ಲ. ಆದರೆ ಎಲ್ಲವೂ ಒಂದೊಂದಾಗಿ ಶುರುವಾಗಬೇಕು ಎಂದೇ ಅನಿಸುತ್ತದೆ. ನನ್ನ ಅಭಿಪ್ರಾಯ ತಪ್ಪು ಆಗಿರಲೂಬಹುದು. ಆದರೆ ಎಷ್ಟು ದಿನ ಮುಚ್ಚಿರಲು ಸಾಧ್ಯ? ಈ ಸಂದರ್ಭದಲ್ಲಿ ಚಿತ್ರಮಂದಿರಗಳನ್ನು ತೆರೆದರೆ ನಡೆಸುವುದೂ ಕಷ್ಟವೇ. ಆದರೆ ವಿತರಕರು, ನಿರ್ಮಾಪಕರು, ಚಿತ್ರಮಂದಿರದ ಮಾಲೀಕರು ಎಲ್ಲರೂ ಒಬ್ಬರಿಗೊಬ್ಬರು ಬೆಂಬಲವಾಗಿ ನಿಂತುಕೊಂಡರೆ ನಡೆಸುವುದು ಕಷ್ಟವಾಗಲಾರದು. ಇಲ್ಲವಾದರೆ ಉಳಿದುಕೊಳ್ಳುವುದು ತುಂಬ ಕಷ್ಟವಾಗಿಬಿಡುತ್ತದೆ. ಈ ಸ್ಥಿತಿ ಮುಂದುವರಿಸಿಕೊಂಡು ಹೋದಷ್ಟೂ ಆರ್ಥಿಕವಾಗಿ ಚೇತರಿಸಿಕೊಳ್ಳುವುದು ಕಷ್ಟವಾಗುತ್ತಲೇ ಹೋಗುತ್ತದೆ. ಈಗಲೇ ಕ್ರಿಯಾಶೀಲವಾಗಿ ಪ್ರಯತ್ನಕ್ಕಿಳಿದರೆ ಬೇಗ ಪರಿಸ್ಥಿತಿ ಸುಧಾರಿಸಬಹುದು.

ಇದು ರಿಸ್ಕ್. ಆದರೆ ನಾವು ಈಗ ರಿಸ್ಕ್ ತೆಗೆದುಕೊಳ್ಳಲೇಬೇಕು. ಯಾಕೆಂದರೆ ಕೊರೊನಾ ಹೋಗೇ ಹೋಗುತ್ತದೆ ಎಂದು ಏನು ಗ್ಯಾರಂಟಿ? ಅದೊಂದು ವೈರಸ್. ನಾವು ಅದರ ಜೊತೆಯಲ್ಲಿಯೇ ಬದುಕಬೇಕು. ನಾವು ಜಾಗೃತರಾಗಿರಬೇಕು ಎನ್ನುವುದು ನಿಜ. ಅದರ ಬಗ್ಗೆ ಎರಡು ಮಾತಿಲ್ಲ. ಆದರೆ ಆ ಜಾಗೃತಿ ಮತ್ತು ಸುರಕ್ಷೆಯ ಜೊತೆಯಲ್ಲಿ ದುಡಿಮೆ ಇಲ್ಲದಿದ್ದರೆ ಊಟಕ್ಕೇ ಗತಿಯಿಲ್ಲದ ಪರಿಸ್ಥಿತಿ ಬರುತ್ತದಲ್ಲ, ಅದನ್ನು ಹೇಗೆ ನಿಭಾಯಿಸುವುದು?

